## ಕರ್ನಾಟಕ ಸರ್ಕಾರ

## ತಹಶೀಲ್ದಾರರು, ಸಿರುಗುಪ್ಪ ಇವರ ನ್ಯಾಯಾಲಯ, ಸಿರುಗುಪ್ಪ.

ಸಂ.ಕಂ/ಹಬ/ವಿವಾದ/92/2014-15 ದಿ:10-06-2016

| ವಾದಿಗಳು | ವಿರುದ್ಧ | ಪ್ರತಿವಾದಿಗಳು |
|---|---|---|
| ಬಾರಿಕರ ಗಂಗಮ್ಮ ಗಂಡ ವೀರೇಶ | | ಬಾರಿಕರ ಮಲ್ಲಮ್ಮ ಗಂಡ ಲೇಟ್ |
| ಕೆ.ಬೆಳಗಲ್ಲು ಗ್ರಾಮ. | | ಬಾರ್ಕಿರ ಯಂಕಪ್ಪ. ದಢೇಸೂಗೂರು |
| ಸಿರುಗುಪ್ಪ ತಾ: | | ಸಿಂಧನೂರು ತಾ: |

ದಾವಾ ಜಮೀನಿನ ವಿವರ

| ತಾಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ | ತರಹೆ |
|---|---|---|---|---|
| ಸಿರುಗುಪ್ಪ | ಕೆ.ಬೆಳಗಲ್ಲು | 406/ಬಿ/3/4 | 3-14 | ಖುಷ್ಕಿ |

ಪೀಠಿಕೆ:-

ಸಿರುಗುಪ್ಪ ತಾಲೂಕು ಕೆ.ಬೆಳಗಲ್ಲು ಗ್ರಾಮದ ಸ,ನಂ.406/ಬಿ/3/4, ವಿ:3-14 ಎಕ್ರೆ ಜಮೀನು ಹಾಲಿ ಪಹಣಿ ಪ್ರಕಾರ ಬಾರ್ಕಿರ ಯಂಕಪ್ಪ ತಂದೆ ರಂಗಪ್ಪ ಇವರ ಹೆಸರಿಗೆ ಪಹಣಿ ದಾಖಲೆ ಇದ್ದು, ಸದ್ರಿಯವರ ಮೊದಲನೇ ಹೆಂಡತಿಯ ಮಗಳಾದ ಬಾರಿಕರ ಗಂಗಮ್ಮ ಗಂಡ ವೀರೇಶ ಇವರು ಪೋತಿವಾರಸು ಮೇರೆಗೆ ಹಕ್ಕು ಬದಲಾವಣೆಗೆ ಅರ್ಜಿ ಸಲ್ಲಿಸಿದ್ದು, ಅರ್ಜಿದಾರರ ಹೆಸರಿಗೆ ಹಕ್ಕುಬದಲಾವಣೆ ಮಾಡಲು, ತಾಲೂಕು ಕಛೇರಿ ಭೂಮಿ ಗಣಕೀಕರಣ ಶಾಖೆಯಿಂದ ಕಂದಾಯ ನಿರೀಕ್ಷಕರು ಕರೂರು ಇವರಿಗೆ ಚೆಕ್‌ಲಿಸ್ಟ್‌ನ್ನು ಕಳುಹಿಸಲಾಗಿ ಕರ್ನಾಟಕ ಭೂ-ಕಂದಾಯ ನಿಯಮಗಳು 1966 ರ ನಿಯಮ 65 ರಂತೆ ನಮೂನೆ 21 ರ ನೋಟೀಸನ್ನು ಗ್ರಾ.ಲೆ. ಕೆ.ಬೆಳಗಲ್ಲು ಇವರು ಗ್ರಾಮದಲ್ಲಿ ಪ್ರಚುರಪಡಿಸಿರುತ್ತಾರೆ. ಸದ್ರಿ ಪ್ರಕರಣದಲ್ಲಿ ಹಕ್ಕು ಬದಲಾವಣೆ ಮಾಡುವ ಸಮಯದಲ್ಲಿ ನಿಗದಿತ ಅವಧಿಗೆ ಮುಂಚೆ ಬಾರಿಕರ ಮಲ್ಲಮ್ಮ ಗಂಡ ಲೇಟ್ ಯಂಕಪ್ಪ ಇವರು ಹಕ್ಕು ಬದಲಾವಣೆ ಮಾಡಬಾರದೆಂದು ದಿ:02-12-2011 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಕಂದಾಯ ನಿರೀಕ್ಷಕರು ಕರೂರು ಇವರು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಹ,ಬ.ಸಂಖ್ಯೆ:123/2011-12 ದಿನಾಂಕ:01-12-2011 ರ ಪ್ರಕಾರ ಈ ನ್ಯಾಯಾಲಯಕ್ಕೆ ಕಡತವನ್ನು ಸಲ್ಲಿಸಿರುತ್ತಾರೆ.

ಸದ್ರಿ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ನೋಂದಾಯಿಸಿಕೊಂಡು ಕರ್ನಾಟಕ ಭೂ-ಕಂದಾಯ ನಿಯಮಗಳು 1966 ರ ನಿಯಮ 67 ಮತ್ತು 43 ರಂತೆ ಪ್ರಕರಣದಲ್ಲಿನ ವಾದಿ ಮತ್ತು ಪ್ರತಿವಾದಿಗಳಿಗೆ ನೋಟೀಸುಗಳನ್ನು ಜಾರಿ ಮಾಡಿ ಪ್ರಕರಣದ ವಿಚಾರಣೆಯನ್ನು ದಿ:24-07-2015 ರಿಂದ ವಿಚಾರಣೆಗೆ ತೆಗೆದುಕೊಳ್ಳಲಾಯಿತು. ವಾದಿ, ಪ್ರತಿವಾದಿಗಳು ವಿಚಾರಣೆಗೆ ಹಾಜರಾಗಿರುತ್ತಾರೆ.

ಸದ್ರಿ ಪ್ರಕರಣದಲ್ಲಿ ದಾಖಲೆ ಪರಿಶೀಲಿಸಲಾಗಿ ದಾವಾ ಜಮೀನು ಅರ್ಜಿದಾರಳ ತಂದೆಯ ಹೆಸರಿಗೆ ಪಟ್ಟಾ ಇದ್ದು, ಹಾಲಿ ಪಟ್ಟಾದಾರನಿಗೆ ಇಬ್ಬರು ಪತ್ನಿಯರೆಂದು ಮೊದಲ ಪತ್ನಿ ಬಾರಿಕರ ಲಕ್ಷ್ಮೀ ಪೋತಿಯಾಗಿದ್ದು, ಅವರ ಮಗಳು ಗಂಗಮ್ಮ ತಮ್ಮ ಹೆಸರಿಗೆ ಹಕ್ಕು ಬದಲಾವಣೆಗೆ ಅರ್ಜಿ ಸಲ್ಲಿಸಿರುತ್ತಾರೆ.

ಆದರೆ, ಹಾಲಿ ಪಟ್ಟಾದಾರನ ಎರಡನೇ ಪತ್ನಿ ಬಾರಿಕರ ಮಲ್ಲಮ್ಮ ಇವರು ಸದ್ರಿ ಜಮೀನು ತನ್ನ ಗಂಡನ ಹೆಸರಿನಲ್ಲಿದ್ದು, ತನಗೂ ಸದ್ರಿ ಜಮೀನಿನಲ್ಲಿ ಭಾಗ ಇರುತ್ತದೆಂದು ಪ್ರಸ್ತುತ ಹಕ್ಕು ಬದಲಾವಣೆ ಮಾಡಬಾರದೆಂದು ತಕರಾರು ನೀಡಿರುವುದರಿಂದ, ಅರ್ಜಿದಾರಳು **ದಿನಾಂಕ:28-05-2015** ರಂದು ನೋಟರಿ ಸಮಕ್ಷಮ ಪ್ರಮಾಣೀಕರಿಸಿದ ಅಫಿಡವಿಟ್ ಸಲ್ಲಿಸಿ, ತಾವುಗಳು ರಾಜೀಯಾಗಿದ್ದು, ತನ್ನ ಹೆಸರಿಗೆ ಹಕ್ಕು ಬದಲಾವಣೆಗೆ ಸಲ್ಲಿಸಿದ ಅರ್ಜಿಯನ್ನು ವಾಪಾಸು ಪಡೆಯುತ್ತಿದ್ದು, ಅದೇರೀತಿ ತನ್ನ ತಂದೆಯ ಹೆಸರಿನಲ್ಲಿ ಪಟ್ಟಾ ಇರುವ ದಾವಾ ಜಮೀನನ್ನು ತನ್ನ ಚಿಕ್ಕಮ್ಮಳಾದ ಬಾರಿಕರ ಮಲ್ಲಮ್ಮ ಗಂಡ ಲೇಟ್ ಬಾರಿಕರ ಯಂಕಪ್ಪ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ತನ್ನ ಯಾವ ಆಕ್ಷೇಪಣೆಗಳು ಇರುವುದಿಲ್ಲವೆಂದು ಹೇಳಿಕೆ ನೀಡಿರುತ್ತಾರೆ. ಆದ್ದರಿಂದ, ಸಿರುಗುಪ್ಪ ತಾಲೂಕು ಕೆ.ಬೆಳಗಲ್ಲು ಗ್ರಾಮ ಸ,ನಂ.406/ಬಿ/3/4, ವಿ:3-14 ಎಕ್ರೆ ಜಮೀನಿಗೆ ಸಂಭಂದಿಸಿ ಈ ಕೆಳಕಂಡ ಆದೇಶ-

**ದಿ:10-06-2016**

**ಸಂ.ಕಂ/ಹಬ/ವಿವಾದ/92/2014-15**

## ಆದೇಶ

ಪೀಠಿಕೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆ, ವಾಸ್ತವಾಂಶ ಹಾಗೂ ದಾಖಲೆಗಳನ್ವಯ ಸಿರುಗುಪ್ಪ ತಾಲೂಕು ಕೆ.ಬೆಳಗಲ್ಲು ಗ್ರಾಮದ ಸ,ನಂ.406/ಬಿ/3/4, ವಿ:3-14 ಎಕ್ರೆ ಜಮೀನು ಹಾಲಿ ಪಹಣಿ ಪ್ರಕಾರ ಬಾರ್ಕಿರ ಯಂಕಪ್ಪ ತಂದೆ ರಂಗಪ್ಪ ಇವರ ಹೆಸರಿಗೆ ಪಹಣಿ ದಾಖಲೆ ಇದ್ದು, ಸದ್ರಿಯವರು ಹಾಗೂ ಮೊದಲ ಪತ್ನಿ ಲಕ್ಷ್ಮೀ ಇವರು ಮರಣ ಹೊಂದಿರುವುದರಿಂದ ಮತ್ತು ಇವರ ಮಗಳು ಬಾರಿಕರ ಗಂಗಮ್ಮ ಇವರು ಸಲ್ಲಿಸಿದ ಅಫಿಡವಿಟ್ ಮೇರೆಗೆ, ಪಟ್ಟಾದಾರನ ಎರಡನೇ ಪತ್ನಿಯಾದ ಬಾರಿಕರ ಮಲ್ಲಮ್ಮ ಗಂಡ ಲೇಟ್ ಬಾರಿಕರ ಯಂಕಪ್ಪ ಇವರ ಹೆಸರಿಗೆ ಪೋತಿವಾರಸು ಮೇರೆಗೆ ಹಕ್ಕು ಬದಲಾವಣೆ ಮಾಡಲು ಆದೇಶಿಸಿದೆ.

ಈ ಆದೇಶ ಹೇಳಿ ಬರೆಯಿಸಿ, ಬೆರಳಚ್ಚು ಮಾಡಿ, ತಪ್ಪುಗಳನ್ನು ತಿದ್ದಿ ದಿ:10-06-2016 ರಂದು ತೆರೆದ ನ್ಯಾಯಾಲಯದಲ್ಲಿ ಬಹಿರಂಗವಾಗಿ ಘೋಷಿಸಿದೆ.

**ತಹಶೀಲ್ದಾರರು,ಸಿರುಗುಪ್ಪ**

ಸಿ.
1.ಭೂಮಿ ಗಣಕೀಕರಣ ಶಾಖೆಗೆ ಸೂಕ್ತ ಕ್ರಮಕ್ಕಾಗಿ
2.ವಾದಿ-ಪ್ರತಿವಾದಿಗಳಿಗೆ
3.ಕಛೇರಿ ಕಡತಕ್ಕೆ